**ದಿನಾಂಕ:26-05-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ 2 ಮತ್ತು 13 ನೇ ಪ್ರತಿವಾದಿ ಪರ ಶ್ರೀ.ಸಿ.ಪಿ.ಜೆ ವಕೀಲರಿಂದ:**

ಸರ್ವೇ ನಂಬರ 175/2 ರ ಜಮೀನನ್ನು ನಾನು ಮತ್ತು ನನ್ನ ತಂದೆಯವರು ಸೇರಿ ಮಹಮ್ಮದ ಹಯಾತ್ ರಸೂಲ ಸಾಬ್ ಬಡಿಗೆ ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಆ ಖರೀದಿ ಪತ್ರಕ್ಕೆ ಸಮ್ಮತಿ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 175 ರ ಜಮೀನು 1993 ರ ವಾಟ್ನಿಯಂತೆ ಅವರ ಹಯಾತಿ ನಂತರ ನನಗೆ ಸೇರಬೇಕೆಂದು ಶರತ್ತಾಗಿದ್ದ ಕಾರಣ ಆ ಕ್ರಯ ಕ್ಕೆ ಪತ್ರಕ್ಕೆ ನಾನು ಸಮ್ಮತಿ ಸಾಕ್ಷಿಧಾರನಾಗಿ ಸಹಿ

ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ವಾಟ್ನಿಯಾದ ಸಂದರ್ಭದಲ್ಲಿ ಆದ ಶರತ್ತಿನಂತೆ ಮುಂದೆ ವಿವಾದಗಳು ಉಂಟಾಗಬಾರದು ಎಂಬ ಕಾರಣಕ್ಕಾಗಿ ಆ ಕ್ರಯ ಪತ್ರಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಖರೀದಿ ಪತ್ರವು ನನ್ನ ಮತ್ತು ನನ್ನ ತಂದೆಯ ಇಚ್ಚೆಯಂತೆ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕ್ರಯದ ಸಂಪೂರ್ಣ ಹಣವನ್ನು ನಾನೇ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಕ್ರಯದ ಹಣ ನಾನು ಪಡೆದುಕೊಂಡಿರುವ ಕಾರಣ ಮುಂದೆ ತೊಂದರೆ ಆಗಬಾರದೆಂಬ ಉದ್ದೇಶಕ್ಕೆ ನನ್ನ ಮತ್ತೊಬ್ಬರ ಸಹಿಯನ್ನು ಸಮ್ಮತಿ ಸಾಕ್ಷಿದಾರರಾಗಿ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ಆ ಕ್ರಯ ಪತ್ರಕ್ಕೆ ಸಮ್ಮತಿ ಸಾಕ್ಷಿದಾರನಾಗಿ ಸಹಿ ಮಾಡಿದ್ದರೂ ಸಹ ಸಹಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮತ್ತು ಚಂದ್ರಶೇಖರಪ್ಪ ರವರು ಕೂಡಿಯೇ ಅಸಲು ದಾವಾ ಸಂಖ್ಯೆ 19/2013 ರಂತೆ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಆ ದಾವೆಯಲ್ಲಿರುವ ಎಲ್ಲಾ ಆಸ್ತಿಗಳು ಈ ದಾವೆಯಲ್ಲಿಯೂ ಸಹ ಸೇರಿಸಲಾಗಿದೆ ಎಂದರೆ ಸರಿ. ಆ ದಾವೆಯಲ್ಲಿ ನನ್ನ ತಂದೆ ಮತ್ತು ಸಹೋದರೆಲ್ಲರೂ ಹಾಜರಾಗಿ ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸರಿಯಾದ ರೀತಿ ಹಾಜರಾಗದೇ ಇರುವುದರಿಂದ ಆ ದಾವೆ ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಚಂದ್ರಶೇಖರಪ್ಪ ನಾನೇ ನಡೆಸಿಕೊಂಡು ಹೋಗುತ್ತೇನೆ ನೀನು ಬರುವುದು ಬೇಡ ಎಂದು ಹೇಳಿದ ಕಾರಣ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನನ್ನ ತಂದೆ ಬದುಕಿದ್ದಾಗಲೇ 1993 ರಂದು ನಮ್ಮ ಕುಟುಂಬದಲ್ಲಿ ವಾಟ್ನಿಯಾಗಿದ್ದು, ಆ ಪ್ರಕಾರದಂತೆ ನಡೆದುಕೊಳ್ಳಿ ಎಂದು ಶರತ್ತು ವಿಧಿಸಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ 1993 ರಲ್ಲಿಯೇ ವಾಟ್ನಿಯಾಗಿದ್ದು, ಪುನಃ ವಾಟ್ನಿ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ